**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.572/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸಂತೋಶ್. ಎಮ್ | ಪ್ರಾಸಾ -1 |
| ತಂದೆಯ ಹೆಸರು | : ಲೇಟ್ ಶಾಂತಿರಾಜಯ್ಯ | ಚಾಸಾ-1 |
| ವಯಸ್ಸು | : 40 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ 23.06.2025 |
| ವಾಸಸ್ಥಳ | : ಕುದುರೆಮುಖ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ.

ದಿ.21.10.2023 ರಂದು ನಾನು ಟ್ರೆಕ್ಕಿಂಗ್ ಗೈಡ್ ಕೆಲಸ ಮುಗಿಸಿ ಮಹಜರ್.3.30 ರ ಸಮಯದಲ್ಲಿ ಕುದುರೆಮುಖ ದಲ್ಲಿ 5 ನೇ ಸೆಕ್ಟರ್ ನಲ್ಲಿ ಇರುವ ನನ್ನ ಮನೆಗೆ ಬಂದು ನೋಡಲಾಗಿ, ನನ್ನ ಮನೆಯ ಹಿಂದಿನ ಬಾಗಿಲು ತೆರೆದಿರುವುದು ಕಂಡು ಬರುತ್ತದೆ. ನಂತರ ಮನೆಯಲ್ಲಿದ್ದ ಅಲ್ಮೇರವನ್ನು ಪರಿಶೀಲಿಸಲಾಗಿ ಅದರಲ್ಲಿದ್ದ ರೂ. 1,25,000/- ನಗದು ಕಳ್ಳತನವಾಗಿರುತ್ತದೆ, ನಂತರ ದೇವರ ಮನೆಯನ್ನು ಪರಿಶೀಲಿಸಲಾಗಿ ಪೂಜೆಗೆ ಇಟ್ಟಿದ್ದಂತಹ 40 ಗ್ರಾಂ ಚಿನ್ನದ ನಾಣ್ಯ, 16 ಗ್ರಾಂ ಚಿನ್ನದ ಸರ, ಬೆಳ್ಳಿಯ ಕರಡಿಗೆಯು ಕಳುವಾಗಿರುವುದು ಕಂಡುಬಂದಿರುತ್ತದೆ. ನಂತರ ಮನೆಯನ್ನು ಪರಿಶೀಲಿಸಲಾಗಿ ವಸ್ತುಗಳು ಚೆಲ್ಲಾಪಿಲ್ಲಿಯಾಗಿರುತ್ತದೆ. ನಂತರ ಸ.6.00 ರ ಸಮಯಕ್ಕೆ ಕುದುರೆಮುಖ ಪೋಲೀಸ್ ಠಾಣೆಗೆ ಹೋಗಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದೂರನ್ನು ದಾಖಲಿಸಿರುತ್ತೇನೆ. ಅದೇ ದಿನ ಸ.6.30 ರ ಸಮಯಕ್ಕೆ ಪೋಲಿಸರು ಲ್ಯಾಪ್ ಟಾಪ್ ಜೊತೆಗೆ, ಬೆರಳಚ್ಚು ತಜ್ಞರು ಮತ್ತು ಶ್ವಾನದಳದೊಂದಿಗೆ ಘಟನಾ ಸ್ಥಳಕ್ಕೆ ಬಂದು, ನಂತರ ಶ್ವಾನದಳದೊಂದಿಗೆ ಮನೆಯನ್ನು ಪರಿಶೀಲಿಸಿ ದೂರನ್ನು ದಾಖಲಿಸಿಕೊಂಡು ಪೋಲಿಸರು ಘಟನಾ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ.

ದಿ.20.01.2024 ರಂದು ಪೋಲಿಸರು ನನಗೆ ದೂರವಾಣಿ ಮುಖಾಂತರ ಕಳವಾಗಿದ್ದ ವಸ್ತುಗಳು ಸಿಕ್ಕಿರುವ ಬಗ್ಗೆ ಮಾಹಿತಿ ನೀಡಿ ಸದರಿ ವಸ್ತುಗಳನ್ನು ಮತ್ತು ಆರೋಪಿಯನ್ನು ನನಗೆ ತೋರಿಸಲಾಗಿ ನಾನು ಅವುಗಳನ್ನು ಗುರುತಿಸಿದ್ದು ಪೋಲಿಸರು ಚಿನ್ನದ ನಾಣ್ಯ, ಚಿನ್ನದ ಸರ, ದೇವರ ತಾಳಿ ಮತ್ತು ರೂ.18,000/- ಹಣವನ್ನು ನನಗೆ ಹಸ್ತಾಂತರಿಸಿರುತ್ತಾರೆ ಆಗ ಸಮಯ ಸ.7.00 ಆಗಿರುತ್ತದೆ. ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಯನ್ನು ಆ ದಿನ ಪೋಲೀಸ್ ಠಾಣೆಯಲ್ಲಿ ನೋಡಿರುತ್ತೇನೆ.

ಸಾಕ್ಷಿಯು ದೂರನ್ನು ಮತ್ತು ಪ್ರ.ವ.ವ ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ದಿ.21.10.2023 ರ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. 2 ಫೋಟೋವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ದಿ.20.01.2024 ರ ಮಹಜರ್ ನ್ನು ನಿಪಿ-6 ಎಂದು ಗುರುತಿಸಲಾಯಿತು. ನಷ್ಟ ಭರ್ತಿ ಪರಿಹಾರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಸಾಕ್ಷಿಯು ಬಿಡುಗಡೆ ಕಾಲದಲ್ಲಿ ತೆಗೆದ ಒಂದು ಫೋಟೋ, ಸಿಡಿ ಮತ್ತು ಕಲಂ 65 ಬಿ ರಡಿಯಲ್ಲಿ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-8 ರಿಂದ 10 ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋಗಳಲ್ಲಿ ಕಾಣುವ ಒಡವೆಗಳನ್ನು ನೋಡಿ ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ನಿಪಿ-11, 12 ಮತ್ತು 13 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಟ್ರೆಕ್ಕಿಂಗ್ ಗೈಡ್ ಆಗಿ 2 ವರ್ಷದಿಂದ ಕೆಲಸ ಮಾಡುತ್ತಿರುತ್ತೇನೆ. ಅಂದರೆ ಪ್ರವಾಸಿಗಳಿಗೆ ಪ್ರವಾಸ ಸ್ಥಳ ದ ಬಗ್ಗೆ ಮಾಹಿತಿಯನ್ನು ನೀಡುತ್ತೇನೆ. ಸದರಿ ಕೆಲಸ ನಿರ್ವಹಿಸಲು ನನಗೆ ಅರಣ್ಯ ಇಲಾಖೆಯಿಂದ ಅನುಮತಿ ಇರುತ್ತದೆ. ಸದರಿ ಅನುಮನತಿ ಪ್ರತಿಯನ್ನು ಪೋಲಿಸರಿಗೆ ನೀಡಿರುತ್ತೇನೆ. ನಾನು ಇರುವ ಮನೆಯಿಂದ ಕುದುರೆಮುಖ ಪೋಲೀಸ್ ಠಾಣೆಯು 100 ರಿಂದ 150 ಮೀ. ದೂರದಲ್ಲಿರುತ್ತದೆ. ಅದೇ ರೀತಿ ಅರಣ್ಯ ಇಲಾಖೆಯೂ ನಮ್ಮ ಮನೆಯಿಂದ 100 ರಿಂದ 150 ಮೀ. ದೂರದಲ್ಲಿರುತ್ತದೆ. ನಾನು ವಾಸ ಮಾಡುತ್ತಿರುವ ಸೆಕ್ಟರ್ 5 ಜಾಗವು ಮೀಸಲಿಟ್ಟ ಅರಣ್ಯ ಪ್ರದೇಶಕ್ಕೆ ಸೇರಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಪ್ರದೇಶವು ಅರಣ್ಯ ಇಲಾಖೆಗೆ ಸೇರಿದ್ದಾಗಿರುವುದರಿಂದ ಅಲ್ಲಿ ಯಾವಾಗಲು ಪೋಲಿಸರು ತಿರುಗಾಡುತ್ತಿರುತ್ತಾರೆ ಎಂದರೆ ಸಾಕ್ಷಿಯು ಕೆಲವೊಮ್ಮೆ ಬರುತ್ತಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತವಾಗಿ ಸೆಕ್ಟರ್ 5 ನಲ್ಲಿ 10 ವಾಸದ ಮನೆಗಳಿರುತ್ತವೆ. ನನ್ನ ಮನೆಯಿಂದ 50 ಮೀ. ದೂರದಲ್ಲಿ ಕೆಲವು ಮನೆಗಳಿರುತ್ತವೆ. ಘಟನೆ ನಡೆದ ದಿನ ಕುರೆಂಜಲ್ ಪೀಕ್ ಎಂಬ ಸ್ಥಳಕ್ಕೆ ಟ್ರೆಕ್ಕಿಂಗ್ ಗೈಡ್ ಆಗಿ ಹೋಗಿರುತ್ತೇನೆ. ಸದರಿ ಪ್ರದೇಶಕ್ಕೆ ಹೋಗುವ ಪೂರ್ವದಲ್ಲಿ ಅರಣ್ಯ ಇಲಾಖೆಯವರ ಅನುಮತಿ ಪಡೆದಿರುತ್ತೇನೆ. ನಾನು ಘಟನೆ ನಡೆದ ದಿನ ಬೆ.8.30 ರ ಸಮಯಕ್ಕೆ ಮನೆಯಿಂದ ಹೊರಟಿರುತ್ತೇನೆ.

ನಾನು ಮನೆಗೆ ಹಿಂತಿರುಗಿದಾಗ ಮಹಜರ್.3.30 ರ ಸಮಯವಾಗಿರುತ್ತದೆ. ನಮ್ಮ ಮನೆಯಿಂದ ಕುರೆಂಜಲ್ ಪೀಕ್ ಗೆ ಒಟ್ಟು 14 ಕೀ.ಮೀ ಆಗುತ್ತದೆ. ಕುರೆಂಜಲ್ ಪೀಕ್ ಗೆ ಕಾಲ್ನಡಿಗೆಯಲ್ಲಿ ತಲುಪಬೇಕಾಗುತ್ತದೆ. ನಮ್ಮ ಮನೆಯಲ್ಲಿ ಯಾವುದೇ ಸಿಸಿ ಕ್ಯಾಮೆರ ಇರುವುದಿಲ್ಲ. ನಾನು ಮನೆಯ ಮುಂಬಾಗಿಲಿನಿಂದ ಒಳಗೆ ಹೋಗಿರುತ್ತೇನೆ. ನಾನು ಹೋಗುವ ಸಮಯದಲ್ಲಿ ಮನೆಯ ಮುಂಬಾಗಿಲು ಬೀಗ ಹಾಕಲಾಗಿತ್ತು. ಸಾಮಾನ್ಯವಾಗಿ ನಾನು ಅಲ್ಮೇರಾ ವನ್ನು ಲಾಕ್ ಮಾಡಿರುವುದಿಲ್ಲ. ಸದರಿ ಅಲ್ಮೇರದ ಕೀ ನನ್ನ ತಾಯಿಯ ಬಳಿ ಇರುತ್ತದೆ. ಮನೆಯ ಹಿಂಬಾಗಿಲಿನ ಚಿಲಕ ಮನೆಯ ಒಳಗಿನಿಂದ ಇರುತ್ತದೆ. ಸದರಿ ಚಿಲಕವು ಕಬ್ಬಿಣದ್ದಾಗಿರುತ್ತದೆ. ಬಾಗಿಲನ್ನು ಒಳಗಿನಿಂದ ಲಾಕ್ ಮಾಡಲಾಗಿದ್ದರೆ ಹೊರಗಿನಿಂದ ತೆಗೆಯಲಾಗುವುದಿಲ್ಲ ಎಂದರೆ ಸರಿ. ನಾನು ಮನೆಯ ಒಳಗೆ ತಲುಪಿದಾಗ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿರುವ ಬಗ್ಗೆ ಪೋಲಿಸರು ಫೋಟೋಗಳನ್ನು ತೆಗೆದಿರುತ್ತಾರೆ. ನಾನು ಪೋಲಿಸರಿಗೆ ದೂರು ನೀಡಿದಾಗ ಸಮಯ 6.00 ಆಗಿರುತ್ತದೆ. ಸದರಿ ಪಿರ್ಯಾದಿಯ ದೂರನ್ನು ನಾನೇ ಪೋಲೀಸ್ ಠಾಣೆಯಲ್ಲಿ ಬರೆದಿರುತ್ತೇನೆ. ನಾನು ನೀಡಿದ ದೂರನ್ನು ಹೊರತುಪಡಿಸಿ ಇನ್ನ್ಯಾವುದೇ ದೂರನ್ನು ನಾನು ಪೋಲೀಸ್ ಠಾಣೆಯಲ್ಲಿ ನೀಡಿರುವುದಿಲ್ಲ. ರೂ.1,25,000/- ಹಣವನ್ನು ನಾನು ಕೆನೆರಾ ಬ್ಯಾಂಕ್ ನಿಂದ ತೆಗೆದುಕೊಂಡು ಬಂದಿರುತ್ತೇನೆ.

ಸದರಿ ಹಣವನ್ನು ನಮ್ಮ ಮನೆಯ ನಿರ್ಮಾಣ ಮಾಡುತ್ತಿರುವ ಬಾಬ್ತು ಸಂಬಳವನ್ನು ನೀಡಲು ತೆಗೆದುಕೊಂಡು ಬಂದಿರುತ್ತೇನೆ. ಸದರಿ ಹಣವನ್ನು ಬ್ಯಾಂಕ್ ನಿಂದ ತಂದಿರುವ ಬಾಬ್ತು ರುಜುವಾತು ಪಡಿಸಲು ಯಾವುದೇ ದಾಖಲಾತಿಗಳನ್ನು ಪೋಲಿಸರಿಗೆ ನೀಡಿರುವುದಿಲ್ಲ. ತನಿಖೆ ಸಮಯದಲ್ಲೂ ಸಹಾ ಪೋಲಿಸರು ಸದರಿ ದಾಖಲಾತಿಗಳನ್ನು ಪಡೆದಿರುವುದಿಲ್ಲ. ಸಾಮಾನ್ಯವಾಗಿ ಆಭರಣಗಳನ್ನು ಖರೀದಿಸಿದ ಸಮಯದಲ್ಲಿ ರಶೀದಿಯನ್ನು ನೀಡುತ್ತಾರೆ ಎಂದರೆ ಸರಿ. ನನ್ನ ಮನೆಯಿಂದ ಕಳುವಾದ ಆಭರಣಗಳನ್ನು ನನ್ನ ತಾಯಿಯವರು ಕಾರ್ಕಳ ಪ್ರಕಾಶ್ ಜ್ಯುವೆಲರಿಯಿಂದ ಖರೀದಿಸಿರುತ್ತಾರೆ. ತನಿಖೆಯ ಸಮಯದಲ್ಲಿ ಸದರಿ ಆಭರಣಗಳ ಬಾಬ್ತು ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ನನ್ನ ಮನೆಯಿಂದ ಕಳುವಾದ ಹಣ

ಮತ್ತು ಒಡವೆಗಳು ನನ್ನ ಸ್ವಾಧೀನದಲ್ಲಿ ಇರುವ ಕುರಿತು ಯಾವುದೇ ದಾಖಲಾತಿಗಳನ್ನು ಪೋಲಿಸರಿಗೆ ನೀಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ಬೆಳ್ಳಿ ನಾಣ್ಯ, ಕರಡಿಗೆ ಮತ್ತು ತಾಳಿ ಪೆಂಡೆಂಟ್ ನ ಕುರಿತು ನನ್ನ ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಸದರಿ ವಸ್ತುಗಳ ತೂಕವನ್ನು ನನ್ನ ದೂರಿನಲ್ಲಿ ನಾನು ನಮೂದಿಸಿರುತ್ತೇನೆ. ಸ.6.30 ರ ಸಮಯಕ್ಕೆ ಪೋಲಿಸರು ಮಹಜರ್ ಕ್ರಮ ಜರುಗಿಸಲು ಘಟನಾ ಸ್ಥಳಕ್ಕೆ ಬಂದಿರುತ್ತಾರೆ.

ಮಹಜರ್ ಕ್ರಮ ಜರುಗಿಸಲು ಪೋಲಿಸರನ್ನು ಹೊರತುಪಡಿಸಿ ನಾನು ಹಾಜರಿರುತ್ತೇನೆ. ಮಹಜರ್ ಕ್ರಮದ ವರದಿಯನ್ನು ಘಟನಾ ಸ್ಥಳದಲ್ಲಿ ಪೋಲಿಸರೇ ಬರೆಯಲಾಗಿರುತ್ತದೆ. ಸದರಿ ವರದಿಯನ್ನು ನಾನು ಓದಿರುತ್ತೇನೆ. ಕೈ ಬರವಣಿಗೆಯಲ್ಲಿ ಇದ್ದಂತಹ ಮಹಜರ್ ವರದಿಯನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲಾತಿಗಳಿಗೆ ಸಹಿ ಮಾಡಿರುವುದಿಲ್ಲ. ನಾನು ಮನೆಗೆ ಹಿಂತಿರುಗಿದಾಗ ಹಿಂಬಾಗಿಲು ಹೊಡೆದು ಅದರ ಲಾಕ್ ಮುರಿದು ಕೆಳಗೆ ಬಿದ್ದಿರುತ್ತದೆ. ಸದರಿ ಹೊಡೆದಿರುವ ಬಾಗಿಲ ಬಾಬ್ತು ಕುರುಹುಗಳಾಗಿ ಸ್ಕ್ರೂ ಕಂಡುಬಂದಿರುತ್ತದೆ. ಸದರಿ ಸ್ಕ್ರೂ ಅಥವಾ ಬಾಗಿಲ ಲಾಕ್ ನ್ನು ಪೋಲಿಸರು ಮಹಜರ್ ಕ್ರಮ ಜರುಗಿಸುವಾಗ ಜಪ್ತಿ ಮಾಡಿಕೊಂಡಿರುವ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಸದರಿ ಸಮಯದಲ್ಲಿ ಪೋಲಿಸರು ಫೋಟೋ ತೆಗೆದಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಬೆರಳಚ್ಚು ತಜ್ಞರು ಘಟನಾ ಸ್ಥಳಕ್ಕೆ ಸ.7.00 ರಿಂದ 7.30 ರ ಸಮಯಕ್ಕೆ ಬಂದಿರುತ್ತಾರೆ ಸದರಿ ಸಮಯದಲ್ಲಿ ಪೋಲಿಸರು ಹಾಜರಿದ್ದರು. ಬೆರಳಚ್ಚು ಪರಿಶೀಲನೆ ಮಾಡುವಾಗ ಫೋಟೋ ತೆಗೆದಿರುವ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಖಚಿತವಾಗಿ ಫೋಟೋ ತೆಗೆದಿರುವ ಬಗ್ಗೆ ತಿಳಿವಿರುವುದಿಲ್ಲ ಆದರೆ ಪರಿಶೀಲನೆ ಮಾಡುವ ಸಮಯದಲ್ಲಿ ಪೋಲಿಸರು ಫೋಟೋ ವನ್ನು ತೆಗೆಯುತ್ತಿದ್ದರು. ದಿ.20.01.2024 ರಂದು ಪೋಲಿಸರು ನೀಡಿದ ಮಾಹಿತಿಯ ಮೇರೆಗೆ ನಾನು ವಸ್ತುಗಳನ್ನು ಹಿಂಪಡೆದಿರುತ್ತೇನೆ.

ಆ ದಿನ ನಾನು ಸ.6.45 ರ ಸಮಯಕ್ಕೆ ಠಾಣೆಗೆ ತಲುಪಿರುತ್ತೇನೆ. ಆ ದಿನ ಠಾಣೆಯಲ್ಲಿ ಪೋಲಿಸರನ್ನು ಹೊರತುಪಡಿಸಿ ಇತರೆ ಯಾರು ಹಾಜರಿರುವುದಿಲ್ಲ. ಚಿನ್ನಾಭರಣಗಳನ್ನು ಮತ್ತು ಹಣವನ್ನು ಹಿಂಪಡೆಯುವಾಗ ಸದರಿ ವಸ್ತುಗಳು ನನ್ನದೇ ಎಂದು ತೋರಿಸಲು ಯಾವುದೇ ರೀತಿಯ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಸದರಿ ಸಮಯದಲ್ಲಿ ಫೋಟೋವನ್ನು ತೆಗೆಯಾಲಾಗಿರುತ್ತದೆ. ಪ್ರಸ್ತುತ ಪ್ರಕರಣವು ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಲಾದ ಚಿನ್ನಾಭರಣ ಮತ್ತು ನಗದು ನನ್ನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಆರೋಪಿ ಮನೆಗೆ ಇರುವ ಅಂತರ ನನಗೆ ತಿಳಿದಿರುವುದಿಲ್ಲ. ಆರೋಪಿಯು ನಮ್ಮ ಅಂಗಡಿಯಿಂದ ದಿನಸಿ ಖರೀದಿ ಮಾಡುತ್ತಿರುತ್ತಾರೆ ಎಂದರೆ ಸರಿ. ನಮ್ಮ ಅಂಗಡಿಯಲ್ಲಿ ಮದ್ಯ ಮಾರಾಟ ಮಾಡುತ್ತಿರುವ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದರಿ ವಿಷಯದ ಕುರಿತು ಆರೋಪಿಯು ನಿಮ್ಮ ವಿರುದ್ಧ ಮಾಹಿತಿ ನೀಡಿದ ಬಾಬ್ತು ನೀವು ರಾಜಕೀಯದಲ್ಲಿ ಪ್ರಭಲವಿರುವ ಕಾರಣ ಸದರಿ ಪ್ರಕರಣವನ್ನು ದಾಖಲಿಸಲು ಬಿಡದೇ ಹೊರಬಂದು, ಪ್ರಸ್ತುಸ ಪ್ರಕರಣವನ್ನು ಆರೋಪಿಯ ವಿರುದ್ಧ ಸೃಷ್ಟಿ ಮಾಡಿರುತ್ತೀರ ಎಂದರೆ ಸರಿಯಲ್ಲ. ಪ್ರಸ್ತುಸ ಪ್ರಕರಣದಲ್ಲಿ ಆರೋಪಿಯು ಜಾಮೀನನ್ನು ಪಡೆದ ನಂತರ ಗ್ರಾಮಸ್ಥರು ಪೋಲಿಸರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ ಕುರಿತು ದಂಗೆ ಎದ್ದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಸದರಿ ವಿಷಯದ ಕುರಿತು ಪಿ.ಎಸ್.ಐ ರುದ್ರಮ್ಮ, ಮಂಜು ಎಂಬುವವರನ್ನು ವರ್ಗಾವಣೆ ಮಾಡಿರುವ ಕುರಿತು ನನಗೆ ಮಾಹಿತಿ ಇರುವುದಿಲ್ಲ. ದಿ.21.10.2023 ರಂದು ಪೋಲಿಸರು ಯಾವುದೇ ರೀತಿ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 20.01.2024 ರಂದು

ಯಾವುದೇ ರೀತಿ ಚಿನ್ನಾಭರಣಗಳನ್ನು ಹಿಂಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.